ಶ್ರೀ ಕೆ. ಎ. ಶಂಕರಗೌಡ.—ಕೆಲವರು ಇದ್ದಾರೆ. ಕೆಲವರು ಅಲ್ಲಿ ಕೆಲಸಮಾಡುತ್ತಿದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ನೀವು (ಎಚ್)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈಗ ರಷ್ಯಾ ದೇಶದಲ್ಲಿ ಈ ದೋಷವನ್ನು ತೆಗೆದುಬಿಟ್ಟಿದ್ದಾರೆ. ಇಲ್ಲಿಯೂ ಅಲ್ಲಿನ ತಜ್ಞರನ್ನು ಕರೆಸಿ, ಏನು ದೋಷವಿದೆ, ಅದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಅಂಥ ದೋಷವೇನೂ ಇಲ್ಲ. ಆದ್ದರಿಂದ ತಜ್ಞರನ್ನು ನೇಮಕ ಮಾಡುವ ಪ್ರಸಂಗವಿಲ್ಲ.

ಶ್ರೀ ಎಂ. ನಾಗಪ್ಪ.—ತಾವು ಪ್ರಶ್ನೆ 287ರಲ್ಲಿ 62ರಿಂದ 66–67ರ ವರೆಗೆ 25 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ ಎಂದು ಹೇಳಿದ್ದೀರಿ. 288 ಪ್ರಶ್ನೆಯ (ಇ) ಉತ್ತರದಲ್ಲಿ 23,25,377 ರೂಪಾಯಿ ಎಂದು ಮೂರು ವರ್ಷದ ಖರ್ಚು ತೋರಿಸಿದ್ದೀರಿ. 5 ವರ್ಷಕ್ಕೆ 25 ಲಕ್ಷ ಖರ್ಚುಮಾಡಿದ್ದೀರಿ. ಮೂರು ವರ್ಷಕ್ಕೆ 23 ಲಕ್ಷ ಖರ್ಚಾಗಿದೆ. ಅಂದರೆ ಕೊಟ್ಟಂತಹ ಲಟರೇಟ್ಸ್ ಸಂಖ್ಯೆ 35 ಸಾವಿರ, ಮತ್ತು 62 ಸಾವಿರ ಚಿಲ್ಲರೆ. ಎರಡು ಸಾವಿರ ಅಂದರೆ ಅರ್ಧಕ್ಕಿಂತಲೂ ಹೆಚ್ಚು ಮೂರು ವರ್ಷಕ್ಕೆ ಖರ್ಚು ಮಾಡಿದ್ದೀರಿ. ಇದನ್ನು ಒಪ್ಪುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಇಲ್ಲಿ ಮೂರು ವರ್ಷಕ್ಕೆ 25 ಲಕ್ಷ ಎಂದು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸೆಂಟ್ರಲ್ ಗೌರ್ನ್‌ಮೆಂಟ್ ಏಡ್‌ನಲ್ಲಿ ಮೊಬೈಲ್ ಯುನಿಟ್ ಮತ್ತು ಲೈಬ್ರೆರಿ ಡೆವಲಪ್‌ಮೆಂಟ್ ಎಂದು 2,18,940 ಇದೆ, ರೀಸರ್ಚ್ 26,500 ಇದೆ, ಪ್ರಿಂಟಿಂಗ್ ಪ್ರೆಸ್ 33,000 ರೂಪಾಯಿ ಎಂದು ಇದೆ. ಇದರಲ್ಲಿ ಎಷ್ಟು ರಿಸರ್ಚ್ ಮಾಡಿದ್ದಾರೆ, ಎಷ್ಟು ಪ್ರಿಂಟಿಂಗ್‌ಪ್ರೆಸ್ ಇವೆ, ಎಷ್ಟು ಲೈಬ್ರೆರಿ ಇವೆ ಎಂದು ಹೇಳುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಇದಕ್ಕೆಲ್ಲಾ ವಿವರ ಬೇರೆ ಪ್ರಶ್ನೆ ಕೇಳಿದರೆ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಯಸ್ಕರ ಶಿಕ್ಷಣ ಮಂಡಳಿಯಲ್ಲಿ 80 ಸಾವಿರ ರೂಪಾಯಿ ದುರುಪಯೋಗವಾಗಿದೆ ಎಂದು ದೂರು ಬಂದಿದೆ, ಅದಕ್ಕೆ ವಿಚಾರಣೆ ನಡೆಸಿದ್ದೀರಾ ?

ಶ್ರೀ ಕೆ. ಎ. ಶಂಕರಗೌಡ.—ದುರುಪಯೋಗವಾಗಿಲ್ಲ, misapplication of funds ಆಗಿರಬಹುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ವಯಸ್ಕರ ಶಿಕ್ಷಣ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಅದಕ್ಕೋಸ್ಕರ ಅದನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಯಾವುದಾದರೂ ಒಂದು ಏರ್ಪಾಟು ಮಾಡುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಪರಿಣಾಮಕಾರಿಯಾಗಿ ಕೆಲಸಮಾಡುವುದಿಲ್ಲವೆಂದು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ಹೇಳಿದ ಹಾಗೆ ವಯಸ್ಕರ ಶಿಕ್ಷಣ ಸಮಿತಿಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಸ್ಥಾಪಿಸುವುದಕ್ಕೆ ಸಾಧ್ಯವಿದೆಯೇ ? ಈಗ ಬೆಂಗಳೂರಿನಲ್ಲಿ ಮಾತ್ರ ಸ್ಥಾಪನೆಯಾಗಿರುವುದರಿಂದ ಎಲ್ಲಾ ಉಳಿದ ಭಾಗಗಳಲ್ಲಿಯೂ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಪ್ರತಿ ಜಿಲ್ಲೆಗೆ ಮಾಡುವುದಕ್ಕಾಗುವುದಿಲ್ಲ. ಇಡೀ ಸ್ಟೇಟಿಗೆ ಒಂದು ಶಿಕ್ಷಣ ಸಮಿತಿ ಇದೆ. ಇದರ ಕರ್ತವ್ಯವ್ಯಾಪ್ತಿ ಇಡೀ ರಾಜ್ಯಕ್ಕೆ ಅನ್ವಯವಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಈಗ ನೀವು ಲಟರೆಸಿ ಕ್ಲಾಸಸ್ ನಡೆಯುವ ಸ್ಥಳಗಳೆಂದು ಟಿ. ನರಸೀಪುರ, ನಂಜನಗೂಡು, ಪೆರಿಯಾಪಟ್ಟಣ, ಗುಂಡ್ಲುಪೇಟೆ, ಕೆ. ಆರ್. ನಗರ, ಕೊಳ್ಳೇಗಾಲ, ಎಚ್. ಡಿ. ಕೋಟೆ, ಯಲಂದೂರು, ಹುಣಸೂರು, ಚಾಮರಾಜನಗರ ಎಂದು ಮೈಸೂರು ಜಿಲ್ಲೆಯಲ್ಲಿ ಮಾತ್ರ ಇದೆ. ಇನ್ನು ಯಾವುದಾದರೂ ಬೇರೆ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೀರಾ ?

ಶ್ರೀ ಕೆ. ಎ. ಶಂಕರಗೌಡ.—ಬೇರೆ ಜಿಲ್ಲೆಯಲ್ಲೂ ಮಾಡಿದೆ.

Production of Food in the State

289 **Sri H. C. LINGA REDDY** (Malur).—

Will the Minister for Food and Civil Supplies be pleased to state :—

(*a*) the quantum of food produced during the current year in the State ;

(*b*) the quantity of foodgrains required in the State ;

(*c*) the shortage therof and how the same devised to be met ;

(*d*) the quantity of foodgrains allotted to the State by the Central Government to meet the shortage for the last three months ;

(*e*) the arrangements made to supply the urban and rural people with foodgrains ?

A.—Sri B. D. JATTI (Minister for Food and Civil Supplies).—

(*a*) Data not yet finalised.

(*b*) Cereals ... 3.6 million tonnes (approx).
Pulses ... 0.7 million tonne (approx).

(*c*) Data not yet finalised, regarding shortage in the current year. Measures to meet the shortage—

1. increasing the area under irrigation.
2. supply of improved seeds.
3. supply of manure and fertilisers.
4. land reclamation and soil conservation.
5. popularising the improved agricultural practices.
6. Allotment of foodgrains from the Centre.

(*d*)

	Dec. 1967	Jan. 1968	Feb. 1968
	(Figures in Tonnes)		
Rice	5,000	2,000	2,000
Wheat	4,000	4,000	6,000
Milo	5,000	5,000	2,000
Gram/ Gramdhal	828	2,970	3,500

(*e*) Through informal rationing in Bangalore and K. G. F. (including the non-mining area) and through *ad hoc* issues to vulnerable sections of the population in other parts of the State, depending on the availability of stocks.

Sri H. C. LINGA REDDY.—It is stated that the data is not yet finalised. May I know how long it will take for the Government to finalise the data with regard to the quantum of food that has been produced ? I also wish to know whether any target has been fixed last year in this behalf ?

Sri B. D. JATTI.—The anticipated production of foodgrains during the year 1967-68 is 27,42,000 tons. I have not got the final figures. We may require a month or two to finalise it. No target has been fixed for the year 1968-69.

Sri H. C. LINGA REDDY.—In (c) several measures have been given to meet the shortage in foodgrains. How much shortage is sought to be met under each of the items 1 to 6 ?

Sri B. D. JATTI.—The total deficit both for cereals and pulses comes to 9,25,788 tons.

ಶ್ರೀ ಎಸ್. ಬಂಗಾರಪ್ಪ.—ನಮ್ಮ ರಾಜ್ಯದಲ್ಲಿ ಈ ಸಾಲಿನಲ್ಲಿ ಇರತಕ್ಕ ಆಹಾರ ಉತ್ಪಾದನೆ ಖರ್ಚು ಇದರಲ್ಲಿಯ ವ್ಯತ್ಯಾಸ ತಿಳಿಸಿದ್ದೀರಿ. ಕೇಂದ್ರದ ಸಹಾಯ ಪಡೆಯಬೇಕು ಎಂದು ಯೋಜನೆ ಮಾಡಿದ್ದೀರಿ. ಕೇಂದ್ರದಿಂದ ನಮ್ಮ ರಾಜ್ಯ ಸಹಾಯ ಪಡೆದಮೇಲೆ ಪ್ರಸಕ್ತ ಸಾಲಿನಲ್ಲಿ ಇರುವ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವಿದೆ ಎಂದು ಭರವಸೆಕೊಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಆಹಾರದ ಪರಿಸ್ಥಿತಿ ಒಳ್ಳೆಯದಿದೆ ಎಂದು ಹೇಳಬಹುದು. ಆದರೆ ಮಾನ್ಯ ಸದಸ್ಯರು ರೈತರು ಲೆವಿ ಕೊಡಬಾರದು ಎಂದು ಹೇಳಿ ಅದಕ್ಕೆ ಪ್ರಯತ್ನ ಮಾಡುತ್ತಾರೆ ಅದರಿಂದ ತೊಂದರೆಯಾಗಬಹುದು.

ಶ್ರೀ ಎಸ್. ಬಸವರಾಜು.—ಸ್ವಾಮಿ, ದೇಶದಲ್ಲಿ ಆಹಾರದ ಕೊರತೆ ಇವೆ ಎಂದು ಹೇಳಿದೆ. ಕಳೆದ ಎರಡು ವರ್ಷಗಳಲ್ಲಿ ಕೊರತೆಯ ಬಗ್ಗೆ ವ್ಯತ್ಯಾಸ ಕಂಡುಬರುತ್ತದೆ. ಇದಕ್ಕೆ ಸರಿಯಾದ ಅಂಕಿಅಂಶಗಳನ್ನು ಒದಗಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಲೆವಿ ಬಗ್ಗೆ ಹೇಳಬೇಕಾದರೆ ನಾವು ಒಂದು ಪಾಲಸಿ ಡಿಸಿಷನ್ ತೆಗೆದು ಕೊಂಡು ಅದರಂತೆ ಲೆಕ್ಕಹಾಕುತ್ತೇವೆ. ಅವರು ಧಾನ್ಯ ಕೊಡದೇ ಇದ್ದರೆ ವ್ಯತ್ಯಾಸವಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಸುಮಾರು 8 ಲಕ್ಷ ಟನ್ ಕೊರತೆ ಇದೆ ಎಂದು ಹೇಳಿದೆ. ಈ ಕೊರತೆ ನಿವಾರಣೆ ಮಾಡುವುದಕ್ಕೆ ಕೇಂದ್ರದಿಂದ ಬರತಕ್ಕಂಥಾದ್ದು ಒಂದು ತಿಂಗಳಿಗೆ 13 ಸಾವಿರ ಟನ್ನು ಮಾತ್ರ. ಹೀಗಾದರೆ ಕೊರತೆ ಎಷ್ಟೊಂದು ಆಗುತ್ತದೆ. ಅದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇದನ್ನು ಹೇಗೆ ಬಗೆಹರಿಸುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಎಷ್ಟು ಆಹಾರ ಧಾನ್ಯ ಬರುತ್ತದೋ ಅಷ್ಟು ದೊರಕಿಸುತ್ತೇವೆ. ರಾಜ್ಯರಾಜ್ಯಗಳ ಪಟ್ಟದಲ್ಲಿ ನೇರವಾಗಿ ಆಹಾರ ಧಾನ್ಯ ಖರೀದಿ ಮಾಡಿ ಕೊಂಡು ಸಪ್ಲೈ ಮಾಡುವುದಕ್ಕೆ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಸರಕಾರ ಡಿಸೆಂಬರ್ ತಿಂಗಳಿನಲ್ಲಿ 5,000 ಟನ್ ಅಕ್ಕಿ, ಜನವರಿ ಫೆಬ್ರುವರಿಯಲ್ಲಿ ಎರಡೆರಡು ಸಾವಿರ ಟನ್ ಅಕ್ಕಿ ಕೊಟ್ಟಿರುವುದನ್ನು ನೋಡಿದರೆ ಅವರು ಕೊಡುವುದು ಕಡಿಮೆಯಾಗುತ್ತಾ ಬರುತ್ತಿದೆ. ನಮ್ಮ ರಾಜ್ಯಕ್ಕೆ ಮುಖ್ಯವಾಗಿ ಬೇಕಾದುದು ಅಕ್ಕಿ. ಕೇರಳ ಸರಕಾರಕ್ಕೆ ಕೊಡದೆ ಮಲತಾಯಿ ಧೋರಣೆ ಅನುಸರಿಸುವ ಹಾಗೆ ನಮ್ಮಲ್ಲಿ ಕಾಂಗ್ರೆಸ್ಸಿನವರು ಇದ್ದಾರೆಂದು ಹೀಗೆ ಕೊಡುತ್ತಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ನಾವು ಕೇಳಿದಷ್ಟು ಆಹಾರ ಧಾನ್ಯ ಹೆಚ್ಚು ಸಂಗ್ರಹ ಅವರಲ್ಲಿ ಇದ್ದರೆ ಕೊಡುತ್ತಾರೆ. ಸಂಗ್ರಹ ಇಲ್ಲದಿದ್ದರೆ ಕಡಿಮೆಕೂಡ ಕೊಡುತ್ತಾರೆ. ಆದರೆ ಕೇರಳ ಸರಕಾರ ಮಾಡಿದ ಹಾಗೆ ನಮ್ಮ ಸರಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೆಲವು ಸದಸ್ಯರು ಲೆವಿ ವಸೂಲು ಮಾಡುವ ಬಗ್ಗೆ ಅಡ್ಡಿ ಆತಂಕಗಳನ್ನು ತರುತ್ತಿರುವುದರಿಂದ ವಸೂಲು ಕಡಿಮೆಯಾಯಿತು ಎಂದು ಹೇಳಿದರು. ಸರ್ಕಾರ ದವರು ನಿಗದಿ ಮಾಡಿದ್ದ ಟಾರ್ಗೆಟ್ ಎಷ್ಟು, ಆ ಸದಸ್ಯರು ಅಡ್ಡಿ ಮಾಡಿದ್ದರಿಂದ ಕಡಮೆ ಆದದ್ದು ಎಷ್ಟು ?

ಶ್ರೀ ಬಿ. ಡಿ. ಜತ್ತಿ.—ನಮ್ಮ ರಾಜ್ಯದ ಟಾರ್ಗೆಟ್ ಮೂರು ಲಕ್ಷ ಟನ್. ಅಡ್ಡಿ ಆತಂಕ ಮಾಡಿದ್ದರಿಂದ ಒಂದೂವರೆ ಲಕ್ಷ ಟನ್‌ನಷ್ಟು ಮಾತ್ರ ವಸೂರಾಗಿದೆ. ಸರಿಯಾಗಿ ಬಾರದೆ ಇದ್ದರೆ ಉಗ್ರ ಕ್ರಮ ಕೂಡ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ದೊಡ್ಡಬೋರೇಗೌಡ.—ಗ್ರಾಮಾಂತರ ಪ್ರದೇಶಗಳಿಗೆ ಯಾವ ಯಾವ ತಿಂಗಳಲ್ಲಿ, ಯಾವ ಯಾವ ವರ್ಷದಲ್ಲಿ ಎಷ್ಟು ಆಹಾರ ಧಾನ್ಯ ಒದಗಿಸಿದೆ, ಯಾವ ಆಧಾರದ ಮೇರೆ ಒದಗಿಸಿದೆ ಎನ್ನುವ ಅಂಕಿಅಂಶಗಳನ್ನು ತಿಳಿಸುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಅಂಕಿ ಹೇಳಲಿಕ್ಕೆ ಸಾಧ್ಯ. ಅದನ್ನು ಒದಗಿಸಬೇಕಾದರೆ ಒಂದು ಗಂಜೆ ಬೇಕಾಗುತ್ತದೆ. ಮಾನ್ಯ ಸದಸ್ಯರು ನನ್ನ ಕಡೆ ಬಂದರೆ ಅವರಿಗೆ ಕೊಡುತ್ತೇನೆ.

Sri DIGAMBARA RAO B. KALMANKAR.—Supplementary to (*b*). May I know whether the same is the requirement for the last 3—4 years as is for the current year?

Sri B. D. JATTI.—Sir, the present question pertains to the current year; if the member puts a separate question for the past 2-3 years' figures, I will supply the information.

ಶ್ರೀ ಎನ್. ಎ. ಚನ್ನೇಗೌಡ.—9 ಲಕ್ಷ ಟನ್ ಆಹಾರಧಾನ್ಯ ಕೊರತೆ ಇರುವುದರಿಂದ ಈಗ ರಾಷ್ಟ್ರದಲ್ಲಿರುವ ಸಿಂಗಲ್ ಸ್ಪೇಟ್‌ಪುಡ್ ಜೋನ್ ತೆಗೆಯುವುದಕ್ಕೆ ನಮ್ಮ ಸರ್ಕಾರ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಈಗಾಗಲೇ ಪ್ರತಿಯೊಂದು ಸಭೆಯೊಳಗೂ ಮಾಡಿದ್ದೇವೆ. ಮುಂದೆಯೂ ಕೂಡ ಅದೇ ರೀತಿ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—9 ಲಕ್ಷ ಟನ್ ಆಹಾರದ ಕೊರತೆ ಇದ್ದಾಗ ಜನತೆಯ ಕೈಯಲ್ಲಿ ಭಿಕ್ಷಾಪಾತ್ರೆ ಕೊಟ್ಟಿದೆ ಈ ಕಾಂಗ್ರೆಸ್ ಸರ್ಕಾರ. ಯಾವಾಗ ಸ್ವಾವಲಂಬನೆ ಯಾಗುತ್ತದೆ ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಯಾವ ವರ್ಷ ಮಳೆ ಸಾಕಷ್ಟು ಆಗುತ್ತದೆ ಆ ವರ್ಷ ಸ್ವಾವಲಂಬನೆ ಯಾಗುತ್ತದೆ.

ಶ್ರೀ ಶರಣಗೌಡ ಇನಾಂದಾರ್.—ಕೇಂದ್ರ ಸರ್ಕಾರದಿಂದ 14 ಸಾವಿರ ಟನ್ ಗೋಧಿ ಬಂದಿದ್ದರೂ ಕೂಡ ಗುಲ್ಬರ್ಗ ಡಿವಿಜನ್ನಿಗೆ ಗೋಧಿ ಸಪ್ಲೈ ಮಾಡದೆ ಇರುವುದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಅವರ ಭಾಗಕ್ಕೂ ಗೋಧಿ ಕೊಡುತ್ತೇವೆ. ಅಲ್ಲಿ ಹೆಚ್ಚು ಉಪಯೋಗ ಮಾಡುವುದಿಲ್ಲ. ಜೋಳ ಹೆಚ್ಚು ಉಪಯೋಗ ಮಾಡುತ್ತಾರೆ. ಎಷ್ಟೋ ಸಾರಿ ಕೊಟ್ಟಿದ್ದನ್ನು ಮಾರಾಟವಾಗದ್ದರಿಂದ ಹಿಂದಕ್ಕೆ ಕಳಿಸಿದ್ದಾರೆ.

Sri SHARAN GOWDA INAMDAR.—Sir, I am very sorry for the statement of the Minister. Our people are habituated to eat only jawar says the Minister. I am very sorry. This is very humiliating. In our parts people are habituated to eat jawar, wheat and rice. It is the duty of the Government to distribute according to the Division. May I know whether Government would distribute the proper share due to our district in the matter of wheat also ?

Sri B. D. JATTI.—I never said that people from Gulbarga division are accustomed to take only jawar. I said they take less of wheat and less of rice. According to the requirements of the people we supply and if there is more requirement, we will supply.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಮುಖ್ಯ ಮಂತ್ರಿಯವರು ಲೆವಿ ಪದ್ಧತಿಯನ್ನು ಕೈಬಿಟ್ಟು, ಓಪನ್ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುತ್ತೇವೆಂದು ಈ ಸಭೆಯಲ್ಲಿ ಹೇಳಿದರು. ಈಗ ಆಹಾರ ಮಂತ್ರಿಗಳು ಉಗ್ರವಾದ ಕ್ರಮಗಳನ್ನು ಲೆವಿ ಕೊಡದೆ ಇದ್ದರೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿರುವ ಮಾತು ನಿಜವೋ ಅಥವಾ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದು ಇವರು ಮುಖ್ಯ ಮಂತ್ರಿಗಳಾದ ಮೇಲೆಯೋ ಎನ್ನುವುದನ್ನು ತಿಳಿಸುತ್ತಾರೆಯೇ ಸ್ವಾಮಿ?

ಶ್ರೀ ಬಿ. ಡಿ. ಜತ್ತಿ.—ನಮ್ಮ ರಾಜ್ಯಕ್ಕೆ ಓಪನ್ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದಿಲ್ಲ ಎಂದು ನಾನು ಹೇಳಲಿಲ್ಲ. ಇನ್ನೊಂದು ರಾಜ್ಯದಿಂದ ನಮ್ಮ ರಾಜ್ಯದವರು ನೇರವಾಗಿ ಕೊಂಡುಕೊಳ್ಳುವುದಕ್ಕೆ ಅವಕಾಶವಿದೆ, ಆ ರೀತಿ ಕೊಂಡುಕೊಂಡು ನಮಗೆ ಇದ್ದಂಥ ಕೊರತೆಯನ್ನು ನೀಗಬೇಕು ಎಂದು ಹೇಳಿದೆ. ಉಗ್ರ ಕ್ರಮಗಳನ್ನು ಎಲ್ಲ ಕಡೆಗಳಲ್ಲಿಯೂ ತೆಗೆದುಕೊಳ್ಳುತ್ತೇವೆಂದು ಹೇಳಲಿಲ್ಲ. ಯಾರು ನಿರ್ದಿಷ್ಟವಾಗಿ ವಿರೋಧಮಾಡುತ್ತಾರೆ ಅಲ್ಲಿ ಮಾತ್ರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಯಾರು ಲೆವಿಕೊಡುವುದನ್ನು ವಿರೋಧಿಸುತ್ತಾರೋ ಅವರಮೇಲೆ ಉಗ್ರ ಕ್ರಮವನ್ನು ಕೈಕೊಳ್ಳುವುದಾಗಿ ಹೇಳಿದಿರಿ. ಶಿವಮೊಗ್ಗ ಜಿಲ್ಲೆಯಲ್ಲಿ ಲೆವಿ ಕೊಡಬಾರದೆಂದು ನಾವು ತೀವ್ರವಾಗಿ ಪ್ರತಿಭಟನೆ ಮಾಡಿದ್ದೇವೆ. ಅಲ್ಲಯೂ ಉಗ್ರ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಯಾರು ಕಾನೂನಿಗೆ ವಿರುದ್ಧವಾಗಿ ವರ್ತಿಸುತ್ತಾರೋ ಅಂಥ ಕಡೆ ಸರ್ಕಾರ ಉಗ್ರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

Teaching Staff of Post-graduate and Research Institute, Bangalore

290. Sri K. H. RANGANATH (Mudigere).—

Will the Minister for Health and Housing be pleased to state :—

(*a*) the number of Professors working in various departments in Post-graduate and Research Institute, Bangalore ;

(*b*) the number of Professors, Associate Professors, Assistant Associate Professors, Readers and Lecturers working in various Medical institutions (Colleges) in the State (Departmentwise list may be furnished) ;

(*c*) out of the officers mentioned at (*a*) and (*b*) above, the number of them belonging to Scheduled Castes and Scheduled Tribes (Departmentwise may be furnished) ;

(*d*) the total number of doctors belonging to Scheduled Castes and Scheduled Tribes working outside the medical institutions (colleges) in the State but possessing qualifications required for being appointed in Medical Institutions (Colleges) ?

A.—Sri K. PUTTASWAMY (Minister for Health and Housing).—

(*a*) As per statement 'A' appended.

(*b*) As per statement 'B' appended.

(*c*) As per statement 'C' appended.

(*d*) Information not readily available.

STATEMENT 'A'

Statement of Professors working in Post-Graduate and Research Institute, Bangalore.

(i) Professors of Post-Graduate studies in Post-Graduate and Research Institute, Bangalore :

(1) Professor of Medicine (1)

(2) Professor of Surgery (1)

(3) Professor of Pathology (1)